**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 47/2024**

ಪಿ.ಡಬ್ಲುಃ 13 ಸಿ.ಡಬ್ಲ್ಯುಃ 24

| | | |
|---|---|---|
| ಸಾಕ್ಷಿಯ ಹೆಸರು | : | ಬಸಪ್ಪ |
| ತಂದೆಯ ಹೆಸರು | : | ಹಮಮಪ್ಪ |
| ವಯಸ್ಸು | : | 34 |
| ವೃತ್ತಿ | : | ಪೇದೆ ನಂಬರ್ 115, ಜೆಸ್ಕಾಂ ಪೊ.ಠಾಣೆ ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ . |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 11.08.2026.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

1) ನಾನು 2019 ರಿಂದ 2025 ರವರೆಗೆ ನಾನು ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ.

2) ದಿನಾಂಕ 18.04.2024 ರಂದು ಪಿ.ಎಸ್.ಐ ರವರ ಆದೇಶದ ಮೇರೆಗೆ ನಾನು ಚಾಸಾ-23 ಮತ್ತು 25 ರವರ ಜೊತೆ ಕೊಲ್ಲಾಪುರದಮ್ಮ ಗುಡಿಯ ಹತ್ತಿರ ಇದ್ದ ಆರೋಪಿ 3 ರಿಂದ 5 ರವರನ್ನು ಮತ್ತು ಕುಂಟನಾಳ ಗ್ರಾಮದ ಬಸ್ ನಿಲ್ದಾಣದಲ್ಲಿ 2 ನೇ ಆರೋಪಿಯನ್ನು ಹಿಡಿದುಕೊಂಡು ಅವರನ್ನು ಠಾಣೆಗೆ ತಂದು ಚಾಸಾ-33 ರವರ ಮುಂದೆ ಹಾಜರು ಮಾಡಿದ್ದೆ.

3) ದಿನಾಂಕ 21.04.2024 ರಂದು ನಾನು ಮತ್ತು ಚಾಸಾ-26 ರವರು ಎತ್ತಿನ ಬೂದಿಹಾಳ ಗ್ರಾಮಕ್ಕೆ ಹೋಗಿ ಆರೋಪಿ 1 ಮತ್ತು 5 ರವರಿಗೆ ಸಂಬಂಧಪಟ್ಟ ಎರಡು ಮೋಟಾರ್ ಬೈಕ್ ಗಳನ್ನು ಪತ್ತೆ ಹಚ್ಚಿ ಅವುಗಳನ್ನು ಠಾಣೆಗೆ ತಂದು ಚಾಸಾ-33 ರವರ ಮುಂದೆ ಹಾಜರು ಮಾಡಿದ್ದೆವು. ಸದರಿಯವರು ಪಂಚನಾಮೆ ಮಾಡಿ ಬೈಕ್ ಗಳನ್ನು ಜಪ್ತು ಮಾಡಿಕೊಂಡಿದ್ದರು. ನಿಪಿ-15 ಪಂಚನಾಮೆಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-15(ಸಿ)

ಎಂದು ಗುರುತಿಸಲಾಯಿತು. ನಿಪಿ-16 ಮತ್ತು 17 ಫೋಟೊದಲ್ಲಿರುವ ಬೈಕನ್ನು ನಾನು ಹಾಜರುಪಡಿಸಿದ್ದೆ. ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ

4) ಚಾಸಾ-33 ರವರು ನನಗೆ ಯಾವುದೇ ಲಿಖಿತವಾದ ಆದೇಶವನ್ನು ನೀಡಿರಲಿಲ್ಲ. ಬೈಕುಗಳ ನೊಂದಣಿ ಸಂಖ್ಯೆಗಳನ್ನು ಮತ್ತು ಇತರ ವಿವರಗಳನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ದಿನಾಂಕ 21.04.2024 ರಂದು ಎತ್ತಿನಬೂದಿಹಾಳ ಗ್ರಾಮಕ್ಕೆ ಹೋಗಿದ್ದೆ ಎಂದು ಮತ್ತು ಬೈಕುಗಳನ್ನು ಪತ್ತೆ ಮಾಡಿ ಚಾಸಾ-33 ರವರ ಮುಂದೆ ಹಾಜರುಪಡಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ದಿನಾಂಕ 18.04.2024 ರಂದು ಆರೋಪಿ 3 ರಿಂದ 5 ರವರನ್ನು ಎತ್ತಿನಬೂದಿಹಾಳ ಗ್ರಾಮದಲ್ಲಿ ಮತ್ತು 2 ನೇ ಆರೋಪಿಯನ್ನು ಕುಂಟನಾಳ ಗ್ರಾಮದಲ್ಲಿ ಪತ್ತೆ ಹಚ್ಚಿ ಚಾಸಾ-33 ರವರ ಮುಂದೆ ಹಾಜರುಪಡಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.